# FOLK DANCES OF GOVAVAS

Dr. ChikkannaYennekatte
Dept. Of Kannada, GFGC, Sira

## ಗೊರವರ ಕುಣಿತ

ಡಾ. ಚಿಕ್ಕಣ್ಣಯಣ್ಣೆಕಟ್ಟೆ

ಗೊರವರ ಕುಣಿತ ಕರ್ನಾಟಕದ ಉತ್ಕೃಷ್ಟ ಕಲಾ ಪ್ರಕಾರಗಳಲ್ಲಿ ಒಂದು, ಧಾರ್ಮಿಕ ಹಾಗೂ ವೃತ್ತಿ–ಈ ಎರಡು ಪ್ರಕಾರಗಳಲ್ಲಿಯೂ ಗೊರವರಕುಣಿತ, ಹಾಡು, ಭಾಗವಹಿಸುವಿಕೆ ಇರುತ್ತದೆ. ಶೈವ ಸಂಪ್ರದಾಯದ ಗೊರವರು; ಸ್ವಯಂ ಮೈಲಾರ ಲಿಂಗ, ಅರ್ಥಾತ್ ಶಿವ ಎಂದೇ ಭಾವಿಸಲಾಗುತ್ತದೆ. ವಗ್ಗಯ್ಯ, ಗೊರವರು, ದೇವರಗುಡ್ಡರು ಎಂದು ಕರೆಯುವ ಸಂಪ್ರದಾಯ ಒಕ್ಕಲುಗಳಲ್ಲಿದೆ. ಗೊರವರ ವಿಶಿಷ್ಟ ವೇಷ ಭೂಷಣ; ಅದಕ್ಕೆ ಪೂರಕವಾಗಿ ಡಮರುಗ, ಕೊಳಲು, ಜಿಂಗಡಿಕೆಯಲಯ ಬದ್ಧ ವಾದ್ಯ ವಿಶೇಷಗಳಿಂದ, ಗೊರವರ ಕುಣಿತ ಕಲಾತ್ಮಕ ಸ್ವರೂಪ ಪಡೆದು ಚಿತ್ತಾಕರ್ಷಕವಾಗಿರುತ್ತದೆ. ಗೊರವರ ಕುಣಿತ ಪ್ರದರ್ಶನದ ಜೊತೆಗೆ ಭಕ್ತಿಯ ಸ್ವರೂಪವನ್ನು ಪಡೆದು: ಭಕ್ತಿಯ ಗೌರವದ ಕಲೆಯಾಗಿ, ತನ್ಮಯವನ್ನು ಉಂಟುಮಾಡುತ್ತದೆ. ಉತ್ಸಾಹ, ಭಯ, ಶ್ರದ್ಧೆ, ವಿಸ್ಮಯ ಆರಾಧನೆಯ ಸಂಮಿಶ್ರ ರೂಪವಾಗಿರುತ್ತದೆ. ಮೈಲಾರದೇವರ ಭಕ್ತರಿಗೆ ಈ ಕಲೆ–ಕೇವಲ ಕಲೆ ಅಲ್ಲ. ಅದು ದೇವರರೂಪ, ಮನೆತನದ ಯೋಗಕ್ಷೇಮ; ರಕ್ಷಣೆ, ಸತ್ಫಲಗಳ ನಿರೀಕ್ಷೆ ಅಪೇಕ್ಷಗಳ ಒಟ್ಟು ಮೊತ್ತವಾಗಿ–ಮನರಂಜನೆಯ ರೂಪ–ಆಧ್ಯಾತಿಕ ಪ್ರತಿರೂಪದತನದಲ್ಲಿ ಕಾಣುವುದು, ದರ್ಶಿಸುವುದು, ಮೈಲಾರ ಒಕ್ಕಲುಗಳಲ್ಲಿ ವ್ಯಾಪಕವಾಗಿದೆ.

ಭಾರತದಾದ್ಯಂತ ಕಂಡುಬರುವ ಗೊರವರು; ಕರ್ನಾಟಕದಲ್ಲಿ ವ್ಯಾಪಕವಾಗಿದ್ದಾರೆ. ಕರ್ನಾಟಕವನ್ನು ಉತ್ತರ–ದಕ್ಷಿಣ ಎಂಬ ವಿಭಜನೆಯ ಹಿನ್ನೆಲೆಯಲ್ಲಿ ಗೊರವರು–ತಮ್ಮನ್ನು ಭಿನ್ನ ಭಿನ್ನ ಹೆಸರುಗಳಿಂದಲೇ ಕರೆದುಕೊಳ್ಳುವ, ಅದರಂತೆ ವಕ್ಕಲುಗಳೂ ನಡೆದುಕೊಳ್ಳುವ ಸಂಪ್ರದಾಯವಿದೆ. ಹಾವೇರಿ ಜಿಲ್ಲೆಯ ರಾಣಿಬೆನ್ನೂರು ಸಮೀಪದ ದೇವರಗುಡ್ಡ ಪರಿಸರದಲ್ಲಿ ದೇವರಗುಡ್ಡರು, ಗ್ವಾರಪ್ಪ, ವಾಘ್ಯ, ವಗ್ಗ ಎಂದು ಕರೆಯುವುದು ವಾಡಿಕೆಯಲ್ಲಿದೆ. ಇದೇ ಸಂಪ್ರದಾಯ ಹಿರೇಮೈಲಾರದೇವಾಲಯ ಪರಿಸರದಲ್ಲೂ ಬಳಕೆಯಲ್ಲಿದೆ. ಇದೇ ಸಂಪ್ರದಾಯ ಹಿರೇಮೈಲಾರ ದೇವಾಲಯ ಇದನ್ನು ಮಣ್ಣ ಮೈಲಾರ ಎಂತಲೂ ಕರೆಯಲಾಗುವುದು. ಇಲ್ಲಿ ಮಹಿಳಾ ಗೊರವಿಯರೂ ಕಂಡು ಬರುತ್ತಾರೆ. ಅಂಗೈ ಅಗಲದ ಸಣ್ಣನಾರಿನ ಅಥವಾ ಬಿದಿರಿನ ಬುಟ್ಟಿಯ ಮೇಲೆ ಭಂಡಾರ, ಅರಿಶಿಣವನ್ನು ಇಟ್ಟುಕೊಂಡು, ಸಾಮಾನ್ಯ ಸೀರೆ, ಕುಪ್ಪಸದ ಉಡುಗೆಯಲ್ಲಿಯೇ ಇರುವ ಗೊರವಿಯರು ಭಿಕ್ಷಾಟನೆ ಮಾಡುತ್ತಿರುವುದು ಕಂಡುಬರುತ್ತದೆ. ಈ ಪರಿಸರವನ್ನು ಹೊರತುಪಡಿಸಿದರೆ ಗೊರವಿಯರು ಕಂಡುಬರುವುದಿಲ್ಲ. ಮಾತ್ರವಲ್ಲ ಇವರು ಡಮರುಗ ಬಾರಿಸುವ, ನರ್ತಿಸುವ, ಮೈಲಾರಲಿಂಗನ ಮೇಲೆ ಪದ, ಕಥೆ, ಹಾಡುವ ಸಂಪ್ರದಾಯವನ್ನು ಹೊಂದಿರುವುದು ವಿಶೇಷವಾಗಿದೆ. ಈ ಕಲೆಯಿಂದಾಗಿಯೇ ಪ್ರಸಿದ್ಧಿ ಪಡೆದಿರುವ, ಬಳ್ಳಾರಿ ಜಿಲ್ಲೆಯ ಹೂವಿನ ಹಡಗಲಿಯ, ಕುರುಬರ ಬೀದಿಯ ಹಚ್ಚಮ್ಮ ಮತ್ತು ಮಾಳಮ್ಮ, ಕರ್ನಾಟಕದ ಜಾನಪದ

ಮತ್ತು ಯಕ್ಷಗಾನ ಅಕಾಡೆಮಿಯಿಂದ ಶ್ರೇಷ್ಠ ಕಲಾವಿದೆ ಪುರಸ್ಕಾರವನ್ನು ಗೊರವರ ಕಲೆಗಾಗಿಯೇ ಪಡೆದಿರುವುದು ವಿಶೇಷ ಉಳಿದಂತೆ ಕರ್ನಾಟಕ ಆಂಧ್ರಗಡಿ ನೆಲದ ಉದ್ದ ಚಳ್ಳಕೆರೆ, ಕಲ್ಯಾಣದುರ್ಗ, ರಾಯದುರ್ಗ, ಅಮರಾಪುರ, ಕೆ. ಶಿವರ, ಮಾದೇಪುರ, ಪೊಗಲ್ ಬಂಡೆ, ಬೀದರ್–ಮೈಲಾರಪುರ, ಇಲ್ಲೆಲ್ಲಾ ವಿಶೇಷವಾಗಿ ಗೊರವರ ಸಂಪ್ರದಾಯದ ಆಚರಣೆ, ಕಲಾವಿದರು, ಕಲಾ ಪ್ರಕಾರಗಳೂ ಅಧಿಕವಾಗಿವೆ.

ಗೊರವರು ಕಂಬಳಿಯ ಉದ್ದನೆಯ ನಿಲುವಂಗಿ, ತಲೆಯ ಮೇಲೆ ಕರಡಿಯ ವೇಷ ಚರ್ಮದ ಉದ್ದನೆಯ ಟೋಪಿ; ಕೊರಳಲ್ಲಿ ಕವಡೆಯಸರ, ಎದೆಯ ಮೇಲೆ ಅಡ್ಡಲಾಗಿ ಪೋಣಿಸಿದ, ಬಟ್ಟೆಗೆ ಹೋಲಿದು ತಯಾರಿಸಿದ ಕವಡೆಯ ಪಟ್ಟಿ; ಹಣೆಯಲ್ಲಿ ವಿಭೂತಿ ಪಟ್ಟೆ, ಕಣ್ಣ ಹುಬ್ಬು ಕೆಂಪು ಬಣ್ಣದ ಲೇಪನ, ಹಣೆ ತುಂಬಾ ಭಂಡಾರ. ಮಧ್ಯ ಮಧ್ಯ ಚಿಕ್ಕಚಿಕ್ಕ ಚುಕ್ಕೆ ಬೊಟ್ಟು, ಬಲಗೈಲಿ ಡಮರಗ, ಎಡ ಬಗಲಿಗೆ ಜೋಳಿಗೆ, ಭಂಡಾರಚೀಲ ಸೊಂಟಕ್ಕೆ, ಸೊಂಡಕ ಸಮಕ್ಕೆ ನೇತಾಡುವ ಬೊಗಸೆ ಅಗಲದದೋಣಿ (ಊಟದತಟ್ಟೆ) ಪುಟ್ಟಗಂಟೆ; ಉದ್ದನೆಯ ನಿಲುವಂಗಿಗೆ ಸಾಲಾಗಿ ಪೋಣಿಸಿರುವ ಕವಡೆ ಸರ, ಸೊಂಟಕ್ಕೂಕವಡೆ ಸರದ ಬಟ್ಟೆಯ ಪಟ್ಟಿಎಡಗೈಲಿ ಪಿಳ್ಳಂಗೋವಿ–ಇವು ಗೊರವರ ವೇಷಭೂಷಣಗಳು.

ಗೊರವರ ಕುಣಿತ, ಪದ ಹಾಡುವುದು, ಇದಕ್ಕೆ ಪೂರಕವಾಗಿ ಡಮರುಗ ಪಿಳ್ಳಂ ಗೋವಿ ಊದುವುದು ಕಂಡುಬರುತ್ತದೆ. ಬಿಡಿ ಬಿಡಿಯಾಗಿ ಹಾಡುವ, ಡಮರುಗ ಬಾರಿಸುವವರೂ ಇದ್ದಾರೆ. ಇವರನ್ನು ಒಂಟಿಗೊರವು ಎಂದು ಕರೆಯುವರು. ಆದರೆ ಕುಣಿತದ ಸಂದರ್ಭದಲ್ಲಿ ಗೊರವರ ತಂಡ ಅಥವಾ ಒಬ್ಬರಿಗಿಂತ್ತಾ; ಎಡಗೈಲಿ ಪಿಳ್ಳಂ ಗೋವಿ ಊದುತ್ತಾ; ಅದಕ್ಕೆ ತಕ್ಕನಾಗಿ ಹೆಜ್ಜೆಹಾಕಿ ಕುಣಿಯುವುದು; ಬರು ಬರುತ್ತಾ ಆಟ ವಿಸ್ತಾರವಾಗಿ ಕದಲಿಕೊಂಡು ಅಂಗಳದ ಅಥವಾ ಬಯಲಿನಲ್ಲಿ ನಿರ್ದಿಷ್ಟ ಪಥದ ಹೊರಗೂ ಲೀಲಾಜಾಲವಾಗಿ, ತದೇಕಚಿತ್ತಾವಾಗಿ ಹಿಂದಕ್ಕೂ ಮುಂದಕ್ಕೂ ಹೊನೆಯತ್ತಾ; ಡಮರುಗದ ನಾದಕ್ಕೆ ತಕ್ಕನಾಗಿ ಹೆಜ್ಜೆ ಹಾಕುವುದು; ಗೊರವರ ಕುಣಿತದ ಸಾಮಾನ್ಯ ಸ್ವರೂಪ. ಆದರೆ ದೋಣಿ ಸೇವೆಯ ಸಂದರ್ಭದಲ್ಲಿ, ಕರಿಯ ಕಂಬಳಿಯ ಗದ್ದಿಗೆಯ ಮೇಲೆ ಸಾಲಾಗಿ ಇಟ್ಟ ದೋಣಿ; ಅದರಲ್ಲಿ ಹಾಕಿದ ಹಾಲು, ತುಪ್ಪ, ಬಾಳೆಯ ಹಣ್ಣು, ಬೆಲ್ಲ, ಜೇನು ಇವುಗಳನ್ನು ತಿನ್ನಲು ಆ ಗದ್ದಿಗೆಯ ಸುತ್ತ ಎರಡು–ಮೂರು ಅಡಿಗಳ ಅಂತರದಲ್ಲಿ ನಿಂತಲ್ಲೇ ಡಮರಗ ಬಾರಿಸುತ್ತಾ; ಕರೆಯಲಾಗುವುದು. ಗೊರವರ ಕುಣಿತ ಗುಂಪು ಕಲಾ ಪ್ರದರ್ಶನ ಹತ್ತರಿಂದ ಇಪ್ಪತ್ತರವರೆಗೆ ಈ ಕಲಾ ತಂಡದಲ್ಲಿರುತ್ತಾರೆ. ಇಂಥ ಒಂದು ಕಲಾ ತಂಡ ಚಾಮರಾಜನಗರ ಸಮೀಪ ರಾಮ ಸಮುದ್ರದಲ್ಲಿದೆ. ಗೊರವರ ಕೆಂಚ ಮಲ್ಲೇಗೌಡ ಈ ತಂಡದ ನಾಯಕ. 'ಜನಪದಶ್ರೀ' ಅತ್ಯುನ್ನತ ಪುರಸ್ಕಾರಕ್ಕೂ ಒಳಗಾಗಿದ್ದ ಕೆಂಚ ಮಲ್ಲೇಗೌಡರು ಗೊರವರ ಕಲೆಯನ್ನು ರಷ್ಯಾ, ಜಪಾನ್, ಜರ್ಮನ್, ಮಾತ್ರವಲ್ಲದೆ ಅಂಡಮಾನ್ ನಿಕೋಬಾರ್ ಪ್ರದೇಶಗಳಲ್ಲೂ ಪ್ರದರ್ಶಿಸುವ ಮೂಲಕ ದೇಶಿ ಬುಡಕಟ್ಟುಕಲೆಯನ್ನು ಅಂತರಾಷ್ಟ್ರೀಯ ಮಟ್ಟದಲ್ಲಿ ಪ್ರದರ್ಶಿಸಿದ ಹಿರಿಮೆಗೆ ಪಾತ್ರರಾದ ಹಿರಿಯರು, ಮೊದಲಿಗರು, ಅದೇ ಪರಂಪರೆಯ ಗೊರವರ ಪುಟ್ಟ ಮಲ್ಲೇಗೌಡ ೯೭ರ ಈ ಮಯೋವೃದ್ಧ ಕಲಾವಿದ, ತನ್ನ ತಂಡದೊಂದಿಗೆ ಡಮರುಗ ಬಾರಿಸುತ್ತಾ, ಕೈಯಲ್ಲಿ ಹಿಡಿದ ಸಣ್ಣ ಕೋಲನ್ನು ತಿರುವುತ್ತಾ ಬರುವ ಭಂಗಿ ನಿಜಕ್ಕೂ ರೋಮಾಂಚನ. ಇವರ ಮಗ ರಾಚಪ್ಪನೂ ಸೇರಿದಂತೆ ೨೦ ಜನರ ಒಂದು ತಂಡ ಇಂದು ಕರ್ನಾಟಕ ಪ್ರತಿಯೊಂದು ಪ್ರತಿಷ್ಠತ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲೂ ಭಾಗವಹಿಸುತ್ತಿರುವುದು,

ಇವರ ವಿಶೇಷ. ಇವರಿಗೆ ಸರಿದೊರೆಯಾಗಿ 'ಈತನಕ ಕರ್ನಾಟಕ'ದಲ್ಲಿ ಒಂದೂ ಗೊರವರ ಕಲಾ ತಂಡ ಬೆಳೆದು ಬಂದಿಲ್ಲ.

ಗೊರವರ ಕುಣಿತ ಎರಡು ಬಗೆಯಲ್ಲಿ ಆರಂಭವಾಗುತ್ತದೆ. ಒಂದು, ಹದಿನೈದು ಕಲಾವಿದರ ಒಂದು ತಂಡ ಪ್ರದರ್ಶನಕ್ಕೆ ಸಿದ್ಧವಾಗಿ ಸಾಲಾಗಿ ನಿಲ್ಲುತ್ತಾರೆ. ಹಿರಿಯಗೊರವ ಮುಂದೆ ಬಂದು, ಡಮರು ಬಾರಿಸಿ, ಪಿಳ್ಳಂಗೋವಿ ಊದಿ ಇತರ ಗೊರವರನ್ನು ರಂಗಕ್ಕೆ ಆಹ್ವಾನಿಸುತ್ತಾನೆ. ನಂತರ ಒಂದೊಂದು ಕರಡಿಗಳ ಹಾಗೆ ಡಮರಗ ಬಾರಿಸುತ್ತಾ, ನಿಧಾನವಾಗಿ ಬಂದು ತಂಡ ಸೇರಿಕೊಳ್ಳುತ್ತಾರೆ. ಪೂರ್ಣತಂಡ ಸೇರಿದ ಕೂಡಲೆ ಹಿರಿಯಗೊರವ ಮಧ್ಯಕ್ಕೆ ಬಂದು ಮೂರು ಸುತ್ತು ಪ್ರಾರಂಭಿಸುತ್ತಾರೆ. ವೃತ್ತಾಕಾರದಿಂದ ಇಂಚಿಂಚೆ ಆಚೆ-ಈಚೆಗೆ ಸರಿದು, ಹಿಂದಕ್ಕೂ ಮುಂದಕ್ಕೂ ತಿರುಗಿ ಡಮರುಗದ ಸದ್ದು, ಕುಣಿತದ ಲಯ, ಪಿಳ್ಳಂಗೋವಿಯ ನಾದಕ್ಕೆ ಹೆಜ್ಜೆಹಾಕುತ್ತಾ ಕುಣಿಯುತ್ತಾ ಹೋಗುವುದು ಇಲ್ಲಿನ ವಿಶೇಷ. ಕರ್ನಾಟಕದ-ಗಡಿ ಪ್ರದೇಶವಾದ ಹೇಮಾವತಿ- ಇಂದಿಗೂ ಗೊರವರ ತಂಗುದಾಣ. ಆ ಪ್ರದೇಶದ ವ್ಯಾಪ್ತಿಯಲ್ಲಿ ಗೊರವು ವ್ಯಾಪಕವಾಗಿ ನೆಲಸಿದ್ದಾರೆ. ಕೆ.ಶಿವರ, ಅಮರಾವತಿ ವಲಸೆ ಈ ಮುಂತಾದ ಗ್ರಾಮಗಳಲ್ಲಿ ಗೊರವರು-ಕೂಡಿಕೊಂಡು ಈ ಕಲೆಯನ್ನು ಪ್ರದರ್ಶಿಸುತ್ತಾರೆ. ಹೇಮಾವತಿ, ಹೆಂಜೇರ್, ನೊಳಂಬ ಸಂಸ್ಥಾನ ಎಂದೆಲ್ಲಾ ಕರೆಯುವ ಈ ಸ್ಥಳ ಕಾಪಾಲಿಕರ ನೆಲೆ ಎಂಬ ಅಭಿಪ್ರಾಯವೂ ಇದೆ. ಇಲ್ಲಿನ ಹೆಂಜೇರು ಸಿದ್ಧೇಶ್ವರನ ಜಾತ್ರೆಯಲ್ಲಿ ಗೊರವರ ಸಂಪ್ರದಾಯಕವಾಗಿಯೇ ಪ್ರಕಟವಾಗುತ್ತದೆ. ಈ ತರದ ಕಲಾ ಪ್ರದರ್ಶನ ಚಿತ್ರದುರ್ಗ, ತುಮಕೂರು, ಶಿವಮೊಗ್ಗ ಭಾಗಗಳಲ್ಲಿ ಬಳಕೆಯಲ್ಲಿದೆ. ಇನ್ನೊಂದು ಡಮರುಗವನ್ನು ಮಾತ್ರ ಬಾರಿಸುತ್ತಾ ಕೈಯಲ್ಲಿ ಬಿದಿರಿನ ಸಣ್ಣ ಬೆತ್ತವನ್ನು ಹಿಡಿದು ಕುಣಿಯುವುದು. ಇದು ಸಾಲಾಗಿ ರಂಗದ ಮೇಲೆ ನಿಂತ ಗೊರವರು, ಹಿಂದಕ್ಕೂ ಮುಂದಕ್ಕೂ ಬಾಗುತ್ತಾ ಕಾಲನ್ನು ನಿಧಾನವಾಗಿ ಹಿಂದಕ್ಕೂ ಮುಂದಕ್ಕೂ ಆಡಿಸುತ್ತಾ, ತಲೆಯನ್ನು ಒದರುತ್ತಾ ಕಾಲನ್ನು ನಿಧಾನವಾಗಿ ಹಿಂದಕ್ಕೂ ಮುಂದಕ್ಕೂ ಆಡಿಸುತ್ತಾ, ತಲೆಯನ್ನು ಒದರುತ್ತಾ ಕುಣಿಯುವುದು, ನಾಯಿಯ ಹಾಗೆ ಗಡರು ಹಾಕುವುದು, ಸಾಮಾನ್ಯ ಜೊತೆಗೆ ಒಮ್ಮೊಮ್ಮೆ ಉದ್ದನೆಯ ಒಂದೇ ಸಾಲಾದರೆ ಇದೆ ತಂಡ ನರ್ತಿಸುತ್ತಲೇ ಮೂರು ಸಾಲುಗಳಾಗಿ ವಿಂಗಡಣೆಯಾಗಿ ಐದುಐದು ಕಲಾವಿದರ ಒಂದು ತಂಡವಾಗಿಯೂ ಕುಣಿಯುತ್ತಾರೆ. ಇವರಲ್ಲಿ ಕುಣಿತದ ವೈವಿಧ್ಯತೆ, ಹಾವಭಾವದಲ್ಲಿ ರೂಕ್ಷತೆ ಎದ್ದುಕಾಣುತ್ತದೆ. ರೌದ್ರತೆ ಈ ತಂಡದ ಪ್ರಧಾನ ಗುಣವಾಗಿದೆ, ಚಾಮರಾಜನಗರ, ಮೈಸೂರು, ಮಂಡ್ಯ ಈ ಭಾಗದ ಗೊರವರ ಕಲೆ ಈ ಮಾದರಿಯದ್ದಾಗಿದೆ. ಈ ತಂಡದಲ್ಲಿ ಅವರ ಎತ್ತರ ಆಕೃತಿಗೆ ತಕ್ಕನಾಗಿ ಸಮಾನ ಉಡುಗೆ ತೊಡುಗೆ ಇರುತ್ತದೆ. ಗೊರವರ ಪುಟ್ಟ ಮಲ್ಲೇಗೌಡ, ಕೆಂಚಮಲ್ಲೇಗೌಡ- ಇವರುಗಳು ಇದೇ ಮಾದರಿಯನ್ನು ಅನುಸರಿಸಿ ಕಲಾ ಪರಂಪರೆಯನ್ನು ಮುಂದುವರಿಸುತ್ತಿದ್ದಾರೆ. ಮೈಸೂರು ಕಡೆಯ ಗೊರವರು ತಮ್ಮನ್ನು ಪಾರ್ವತಿ ಗೊರವರೆಂದು ಕರೆದುಕೊಳ್ಳುತ್ತಾರೆ. ಮುಡುಕುತೊರೆಯ ಪಾರ್ವತಿ ಇವರಿಗೆ ಪ್ರಿಯವಾದದೈವ. ಮಲ್ಲಿಕಾರ್ಜುನ ಶಿವನಾದರೆ ಪಾರ್ವತಿ ಕುರುಬರ ಗಂಗೆಮಾಳಿಯ ಪ್ರತಿರೂಪ ಎಂಬ ಭಾವನೆ ಇವರಲ್ಲಿದೆ. ಸ್ತ್ರೀಸಂಬಂಧಿ ದೇವತಾ ಕಾರ್ಯಗಳಲ್ಲಿ ವಿಶೇಷವಾಗಿ ಜಾತ್ರೆ, ಉತ್ಸವ, ಬ್ರಾಹ್ಮಣರು, ವೈಶ್ಯರು ನಡೆಸುವ ಮುಂಜಿ, ಚೌಲ, ನಾಮಕರಣ ಈ ಸಂದರ್ಭಗಳಲ್ಲಿ ಗೊರವರಿಗೆ ವಿಶೇಷ ಗೌರವ ನೀಡುವ ಜೊತೆಗೆ ಗೊರವರನ್ನಾಡಿಸುವ ಮೂಲಕ ಗೊರವರ ಕಲೆ

ಉಳಿಯಲು ಪ್ರಮುಖ ಕಾರಣರಾಗಿದ್ದಾರೆ. ಈ ಭಾಗದ ಗೊರವರ ದೀಕ್ಷೆಯೂ ಮುಡುಕುತೊರೆ ಮಲ್ಲಿಕಾರ್ಜುನನ ಕ್ಷೇತ್ರದಲ್ಲಿಯೇ ಜರುಗುತ್ತದೆ.

**ನಾಯಿ ಗೊರವರು:** ಇದು ಒಂದು ಸಂಪ್ರದಾಯ, ಗೊರವ ಸಂಸ್ಕಾರ ನಾಯಿಯ ಮೂಲದಿಂದಲೇ ಬಂದಿರುವುದು. ಗೊರವರು ಒಟ್ಟುಗೂಡಿ. ಭಕ್ತರು ನೀಡಿದ ಎಡೆ ಸೇವಿಸುವಾಗ ನಾಯಿಯ ಸದೃಶವಾಗಿ ವರ್ತಿಸುತ್ತಾ, ಕಚ್ಚಾಡುತ್ತಾ, ಅಭಿನಯಿಸುತ್ತಾರೆ. ಕಚ್ಚಾಡಿ ಮೈ ಮುಖ ಗಾಯ ಮಾಡಿಕೊಳ್ಳಲೂಬಹುದು. ವಿಶೇಷವಾಗಿ ದೇವರ ಉತ್ಸವಗಳಲ್ಲಿ, ದೋಣಿಸೇವೆಯ ಸಂದರ್ಭದಲ್ಲಿ ಈ ಆಚರಣೆ ಕಡ್ಡಾಯವಾಗಿರುತ್ತದೆ. ಮೈಲಾರದೇವರ ದೇವಾಲಯದ ಆವರಣದಲ್ಲಿ; ಕರಿಯ ಕಂಬಳಿಯನ್ನು ಹಾಸಿ, ಅದನ್ನು ಹೂ, ಪತ್ರೆ, ಭಂಡಾರದಿಂದ ಅಲಂಕಾರಗೊಳಿಸಿ, ಆ ಜಾಡಿಯ ಮೇಲೆ ಕಂಚಿನ, ಮರದ ದೋಣಿಯನ್ನು ಸಾಲಾಗಿ ಇಡಲಾಗುತ್ತದೆ. ಹೀಗೆ ಇಟ್ಟದೋಣಿಗೆ ಮೀಸಲು ಹಾಲು ತುಪ್ಪ ಫಲಹಾರವನ್ನು ತುಂಬಲಾಗುವುದು ಪ್ರಧಾನ ಪ್ರಜೆ ನಡೆದ ತರುವಾಯ ಹಿರಿಯ ಗೊರವ ಖಡ್ಗ ಅಂದರೆ, ಮೈಲಾರಲಿಂಗನ ನಾಮ ವಿಶೇಷ ಅಥವಾ ಮಹಿಮಾವಳಿಯನ್ನು ಹೇಳುತ್ತಾನೆ. ಸಾಲಾಗಿ ನಿಂತ, ಗೊರವರ ವೇಷದ ಎಲ್ಲ ಗೊರವರು ಡಮರುಗ ಬಾರಿಸುತ್ತಾ; "ಏಳುಕೋಟಿ ಏಳುಕೋಟಿ ಮೈಲಾರ" ಎಂದು ಒಮ್ಮೆಗೆ ದೋಣಿಗೆ ಬಾಯಿಹಾಕುವುದು, ಫಲಹಾರ ತಿನ್ನುವುದು; ಆಗ ನಾಯಿಯ ಮಾದರಿಯಲ್ಲಿಯೇ ಕಚ್ಚಾಡುವುದು; ಅಸಹಾಯಕ ಯಾರಾದರೂ ಒಬ್ಬರನ್ನು ವಿಶೇಷವಾಗಿ ಕಚ್ಚಾಡುವ ಹಾಗೆ ಮಾಡಿ ಸಾಯಿಸುವ ಆಟ ಆಡಲಾಗುತ್ತದೆ. ಕೊನೆಗೆ ಗೊರವರೆಲ್ಲ ಕೂಡಿಕೊಂಡು ಮೈಲಾರದೇವರ ಹತ್ತಿರಹೋಗಿ ಬಡಗೊರವರನ್ನು ಬದುಕಿಸಿ ಕೊಡುವಂತೆ ಪ್ರಾರ್ಥನೆ ಸಲ್ಲಿಸುತ್ತಾರೆ. ಜನಗಳಿಂದ (ಸುತ್ತುವರಿದ) ಹಣ ಸಂಗ್ರಹಿಸುತ್ತಾರೆ. ಕೊನೆಯಲ್ಲಿ ಸತ್ತಂತಿದ್ದ ಗೊರವ ಎದ್ದು ಕಳತುಕೊಳ್ಳುವ ಒಂದು ಪುಟ್ಟರೂಪಕವನ್ನು ಸೊಗಸಾಗಿ ಪ್ರದರ್ಶಿಸುವುದು ನಾಯಿ ಗೊರವರ ರೋಚಕ ಕಲೆಯಾಗಿದೆ. ತುಮಕೂರು, ಸಿರಾ, ಆಂಧ್ರದ ಹೇಮಾವತಿ, ಕಿ. ಶಿವರ, ಹಿರಿಯೂರು, ಗೂಳ್ಯ, ಹರಿಯಬ್ಬೆ, ಅರೆ ಸಮುದ್ರ, ಹರ್ತಿಕೋಟೆ, ಹೊಸದುರ್ಗದ ಮೈಲಾರಪುರ, ಮಲೆನಾಡಿಹಳ್ಳಿ ಈ ಭಾಗಗಳಲ್ಲಿ ಈ ಕಲೆ ಇಂದಿಗೂ ಜೀವಂತವಾಗಿದೆ. ಜೊತೆಗೆ ತಮ್ಮ ಎರಡು ತೊಡೆಗಳಿಗೆ ಬಗಣಿಗೂಟ ಬಡಿದುಕೊಳ್ಳುವ ಬಗಣಿಸೇವೆ, ಉದ್ದನೆಯ ಕಬ್ಬಿಣದ ಸರಪಣಿ ಹರಿಯುವ ಸರ್ಪಣಿ ಸೇವೆ, ಶಸ್ತ್ರ ಪವಾಡ ಮೊದಲಾದ ಉಗ್ರ ಪ್ರದರ್ಶನವನ್ನು ನಾಯಿ ಗೊರವ ಪರಂಪರೆಯಲ್ಲಿ ಕಾಣಬಹುದು.

ಒಂದು ಕಾಲದಲ್ಲಿ ಬೀದಿಯ, ಭಿಕ್ಷಾಟನೆ, ದೇವಾಲಯ, ಭಕ್ತರ ಮನೆಗಳಿಗೆ ಸೀಮಿತವಾಗಿದ್ದ ಗೊರವರ ಕಲೆ ಇಂದು ಪ್ರಸಿದ್ಧ, ಆಕರ್ಷಕ ಕಲಾಪ್ರಕಾರವಾಗಿ, ವೇದಿಕೆಗಳಲ್ಲೂ ರಾರಾಜಿಸುತ್ತಿರುವದು ಈ ಕಲೆಗೆ ಅಂತರಾಷ್ಟ್ರೀಯ ಹಿರಿಮೆ, ಗೌರವ ಬಂದಿರುವುದು ಹೆಮ್ಮೆಯ ಸಂಗತಿ. ಕರ್ನಾಟಕ ಸರ್ಕಾರವು ಈ ಕಲೆಯನ್ನು ಗಂಬೀರವಾಗಿಯೇ ಪರಿಗಣಿಸಿದೆ. ಸರ್ಕಾರದ ಉಚ್ಚ ಗೌರವ 'ಜನಪದಶ್ರೀ' ಪ್ರಶಸ್ತಿ ಗೊರವರ ಪುಟ್ಟ ಮಲ್ಲೇಗೌಡ ಚಾಮರಾಜನಗರದವರಿಗೆ ಸಂದಾಯವಾಗಿದೆ. ತುಮಕೂರು ಜಿಲ್ಲೆಯ ಗೊರವರ ದೊಡ್ಡಗೊರವಯ್ಯ (ಯಣ್ಣೆಕಟ್ಟೆ), ಗೊರವರ ಬೆಟ್ಟಲಿಂಗಯ್ಯ ಇರಕಸಂದ್ರ, ಗೊರವಿಯರಾದ ಹೂವಿನ ಹಡಗಲಿಯ ಮಾಳವ್ವ ಗೊರವಿ, ಹುಚ್ಚಮ್ಮ

ಗೊರವಿಯರಿಗೆ ಶ್ರೇಷ್ಟಕಲಾವಿದೆ ಪ್ರಶಸ್ತಿಯನ್ನು ಕರ್ನಾಟಕ ಜಾನಪದ ಅಕಾಡಮಿ ನೀಡಿ ಗೌರವಿಸಿರುವುದು ಈ ಕಲೆಯ ಸರ್ವ ಶ್ರೇಷ್ಠತೆಯ ಗುಣವಾಗಿದೆ.

**ಮಾಹಿತಿ ನೀಡಿದವರು**

1. ಶ್ರೀ ನೀಲಪ್ಪಚನ್ನಗಿರಿ, ಕುರುಬರಹಟ್ಟಿ, ಚನ್ನಗಿರಿ.
2. ಶ್ರೀಮತಿ ಮಾಳವ್ವ ಗೊರವಿ, ಕುರುಬರ ಬೀದಿ, ಹೂವಿನ ಹಡಗಲಿ.
3. ಶ್ರೀ ಮೈಲಾರಪ್ಪ, ದುರ್ಗಿಗುಡಿ ಬೀದಿ, ಶಿವಮೊಗ್ಗ.
4. ಶ್ರೀ ಕುರಿಗೊರವಯ್ಯನವರ ಹನುಮಕ್ಕ ಯಣ್ಣೆಕಟ್ಟೆ, ಗುಬ್ಬಿತಾಲ್ಲೂಕು.
5. ಶ್ರೀ ಗುರುವಯ್ಯಒಡೆಯರ್, ತಾಳಿಕಟ್ಟೆ, ಹೊಳಲ್ಕೆರೆ ತಾಲ್ಲೂಕು.
6. ಶ್ರೀ ಕೆ. ಮಲ್ಲಣ್ಣ. ಕೆ. ಶಿವರ, ಅಮರಾಪುರ ಮಂಡಲ್,  ಮಡಕಶಿರಾ ತಾಲ್ಲೂಕು.
7. ಶ್ರೀ ಪೂಜಾರಿಚಿಕ್ಕಣ್ಣ, ಯಣ್ಣೆಕಟ್ಟೆ,ಗುಬ್ಬಿತಾಲ್ಲೂಕು.